ಇಂಥ ಘೋರ ಹಿಂಸೆಯ ಮೂಲ ಯಾವುದು? ಮನುಷ್ಯ ಮಾತ್ರರ ಹಟವೋ, ರಾಜ್ಯದಾಹವೋ, ಐಶ್ವರ್ಯ ಮೋಹವೋ ಅಥವಾ ಯಾರಿಗೂ ಅರಿಯದಂತೆ ಎದೆಯಗೂಡನ್ನು ನಿರಂತರ ಕೊರೆಯುವ ಸ್ತ್ರೀಪ್ರೇಮವೋ, ಅದನ್ನು ಹೇಗಾದರೂ ವಶಪಡಿಸಿಕೊಳ್ಳಲಾಗದ ದ್ವೇಷದ ಉರಿಯೋ? ಯಾರಿಗೂ ಈ ಕುರಿತು ವಿವರಿಸಲಾಗದು! ಹಾಗೆ ಏನನ್ನೂ ಬಿಚ್ಚಿಡಲಾಗದ ಹುಚ್ಚಾಟಕ್ಕೆ ಅಭಿಮಾನ, ಛಲ ಎಂಬ ಹುಸಿ ಹೆಸರನ್ನಿಟ್ಟುಕೊಂಡು ನರಕ ಮುಟ್ಟುವುದನ್ನು ಪಂಪ, ರನ್ನರಷ್ಟೇ ಅಲ್ಲ ಕುಮಾರವ್ಯಾಸಾದಿ ಮಹಾಕವಿಗಳು ಇದರ ಕಥನವನ್ನು ಬಹು ನಿಚ್ಚಳವಾಗಿ ತಮ್ಮ ಕಾವ್ಯ ಕನ್ನಡಿಗಳಲ್ಲಿ ಚಿತ್ರಿಸಿದ್ದಾರೆ. ಇಂಥ ಸಾವು ನೋವಿಗೆ ಆರಾಧನೆಯ ಸ್ವರೂಪವನ್ನು, ಸ್ವರ್ಗದ ಮೋಹವನ್ನು ಹುಟ್ಟುಹಾಕಿದ್ದು ಮತ್ತೊಂದು ದುರಂತ.

ಯುದ್ಧೋನ್ಮಾದವನ್ನು, ಸಂಪತ್ತಿನ ಗಳಿಕೆಯನ್ನು ಮನುಷ್ಯ ಇನ್ನಿಲ್ಲದಂತೆ ಬಯಸಿದ. ಆದರೆ ಸಕಲ ಚರಾಚರಗಳಿಗೆ ಆಶ್ರಯ ನೀಡುವ ಪ್ರಕೃತಿ ಮನುಷ್ಯನ ಈ ಬಗೆಯ ದುರಾಸೆಯನ್ನು ಪೋಷಿಸುತ್ತದೆಯೇ? ಇಂಥದೂ ಒಂದು ಸಂದರ್ಭ 'ಗದಾಯುದ್ಧ'ದಲ್ಲಿ ಕಾಣಿಸುತ್ತದೆ. ದುರ್ಯೋಧನ ವೈಶಂಪಾಯನ ಸರೋವರದ ಬಳಿ ಬಂದಾಗ ಒಂದಷ್ಟು ದೂರದಿಂದ ಮುಂದು ಮುಂದಾಗಿ ಹೆಜ್ಜೆ ಇಟ್ಟರೆ, ಶತ್ರುಗಳಿಗೆ ತನ್ನ ಹೆಜ್ಜೆಯ ಗುರುತು ಕಾಣಿಸಬಹುದೆಂದು ಹಿಂದು ಹಿಂದಾಗಿ ಕೊಳದ ತಡಿಯನ್ನು ಸೇರಿದ. ಅಂದರೆ ಯುದ್ಧವೆಂಬುದು ಮನುಷ್ಯನ ಹಿಂದು ಹಿಂದಾದ ನಡೆಯೋ, ಮುಂದಾದ ನಡೆಯೋ? ಇದಕ್ಕಿಂತಲೂ ಸರೋವರದ ಬಳಿ ದುರ್ಯೋಧನನ ಯುದ್ಧಚೇಷ್ಟೆಯ ಹಾನಿಯನ್ನು ಕುರಿತು ಒಟ್ಟು ಪ್ರಕೃತಿಯೇ ವಿರೋಧಿಸುವ ಒಂದು ಪದ್ಯವಿದೆ.

ಕುರುಪತಿ ನಿನ್ನ ಪೊಕ್ಕ ತೋಱಿಗಳ್ ಮೊದಲಾಗಿರೆ ಬತ್ತಿದಪ್ಪುವೀ
ದೊರೆಯ ದುರಾತ್ಮನಂ ಖಳನನಾನೊಳಕೊಂಡೊಡೆ ಭೀಮನೀಸರೋ
ವರಮುಮನೆಮ್ಮುಮಂ ಕದಡುಗುಂ ಪುಗದಿರ್ ತೊಲಗೆಂದು ಬಗ್ಗಿಪಂ
ತಿರೆ ನೆಗಱ್ದತ್ತನೇಕ ಬಕ ಕೋಕ ಮರಾಳ ವಿಹಂಗಸ್ವನಂ

ರನ್ನನ ಈ ಪದ್ಯ ಪಂಪನಲ್ಲಿಯೂ ಕಾಣಿಸಿಕೊಳ್ಳುತ್ತದೆ. ಪ್ರಕೃತಿ ಮತ್ತು ಪುಷ್ಪಪ್ರಿಯ ಪಂಪನು ದುರ್ಯೋಧನನ ಯುದ್ಧಾಂತ್ಯದ ಕೃತ್ಯವನ್ನು ಹೀಗೆ ಪ್ರಕೃತಿಯ ಕಡೆಯಿಂದ ಊಹಿಸಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ಸರೋವರದ ಸುತ್ತ ಇರುವ ಹಕ್ಕಿಪಕ್ಷಿಗಳು ಎಲೈ ದುರ್ಯೋಧನನೇ ಬದುಕಿನ ತೊರೆಯನ್ನೇ ಬತ್ತಿಸಿದ ನೀನು ನಮ್ಮತ್ತ ಬಂದರೆ ನಮ್ಮನ್ನೂ ಒಳಗೊಂಡಂತೆ ಸರೋವರದ ನೀರು, ಹಸಿರು ಕದಡಿ ಹೋಗುತ್ತದೆ, ಅತ್ತಲೇ ಸಾರು ಎಂದು ಹೇಳುತ್ತಿವೆ. ಇಲ್ಲಿ ಅಗಡು ಮನುಷ್ಯ ಮಾತ್ರನನ್ನು ದೂರ ತಳ್ಳಿ ಪ್ರಕೃತಿ ತನ್ನನ್ನೇ ತಾನು ರಕ್ಷಿಸಿಕೊಳ್ಳಲು ಹೊರಟಿದೆ.

★★★

ರನ್ನನ ಮೇಲೆ ಪ್ರಭಾವ ಬೀರಿರುವ ಭಟ್ಟನಾರಾಯಣನ 'ವೇಣಿ ಸಂಹಾರ' ಸಂಸ್ಕೃತ ನಾಟಕದ ಮೂರನೆಯ ಅಂಕದ ಆರಂಭ ಭಾಗದಲ್ಲಿ ರಣರಂಗದೊಳಗೆ ಸತ್ತ ಸೈನಿಕರ ಮಾಂಸ, ಮಜ್ಜೆ, ತಲೆಯೋಳುಗಳನ್ನು ಕೊಂಡೊಯ್ದು ತಂತಮ್ಮ ಗುಹೆಗಳಲ್ಲಿ ದಾಸ್ತಾನು ಮಾಡುತ್ತಿದ್ದ ರಕ್ಕಸರು ಇದ್ದರೆಂಬ ದೃಶ್ಯ ವಿವರವಿದೆ. ಆ ಪಾತ್ರಗಳ ಹೆಸರು ರುಧಿರಪ್ರಿಯ, ವಸಾಗಂಧೆ. ಈ ರುಧಿರಪ್ರಿಯನಿಗೆ ದ್ವಿಜಗುರು ದ್ರೋಣನ ದೇಹದ ರಕ್ತ ಕುಡಿಯಲು ಭಯ, ಗಂಟಲು ಸುಡುತ್ತದಂತೆ. ಇದನ್ನೇ ಮುಂದುವರೆಸುವ ರನ್ನ ಕುರುಕ್ಷೇತ್ರ ಯುದ್ಧರಂಗವನ್ನು ಮಾಂಸ ಮಾರಾಟದ ಸಂತೆ ಮಾಡಿಕೊಂಡು ಪುಲ್ಮರುಳುಗಳು 'ಇದು ಇಂಥ ವೀರನ ಬುರುಡೆ, ಅಂಥವನ ದೇಹದ ಕೈಕಾಲು, ಮಾಂಸ'